**ಸಾಕ್ಷಿಯನ್ನು ದಿಃ 19.05.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಸಂಸ್ಥೆಯವರು ನೀಡಿರುವ ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು, ನಿಆರ್. 4 ಎಂದು,

1 ನೇ ಎದುರುದಾರರಿಗೆ ನೀಡಿರುವ ನೋಟೀಸ್ ಹಾಜರು ಪಡಿಸಿದ್ದು ಅದನ್ನು ನಿಆರ್. 5 ಎಂದು,

ಅಂಚೆ ರಶೀದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಆರ್. 5(ಎ) ಎಂದು,

ವಿಮಾ ಪಾಲಿಸಿಯ ಯಥಾ ನಕಲನ್ನು ಹಾಜರುಪಡಿಸಿದ್ದು, ನಿಆರ್. 6 ಎಂದು ಗುರುತಿಸಲಾಯಿತು. ಆದುದರಿಂದ ಅರ್ಜಿಯನ್ನು ವಜಾಗೊಳಿಸಬೇಕಾಗಿ ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

ಎದುರುದಾರರ ವಾಹನದ ಚಾಲಕ/ಮಾಲೀಕನಿಗೆ ನೋಟೀಸ್ ತಲುಪಿದೆ. ಅದಕ್ಕೆ ಪ್ರತ್ಯುತ್ತರ ಬಂದಿಲ್ಲ. ನೋಟೀಸ್ ತಲುಪಿದ ಬಗ್ಗೆ ಸ್ವೀಕೃತಿ ಹಾಜರು ಪಡಿಸಿಲ್ಲ. ಪೋಲೀಸ್ ತನಿಖೆ ಬಗ್ಗೆ ನನಗೆ ಯಾವುದೇ ತಕರಾರಿಲ್ಲ. ಸಾಕ್ಷಿದಾರರಾದ ಆರ್.ಡಬ್ಲ್ಯೂ 1 ರವರ ಪ್ರಕಾರ ಅಪಘಾತದ ದಿನ ಎಫ್.ಸಿ. ಇತ್ತು ಎಂದರೆ ಸರಿಯಲ್ಲ. ನಮ್ಮ ಕಂಪನಿಯ ಸಿಬ್ಬಂದಿಯಿಂದ ಮಾಲೀಕನಿಂದ ದಾಖಲೆ ಪಡೆದುಕೊಂಡಿಲ್ಲ. ಅರ್ಜಿದಾರರಿಗೆ ವಾಹನ ಚಾಲನ ಪರವಾನಗಿ ಇತ್ತು ಎಂದರೆ ಸರಿಯಲ್ಲ. ಎದುರುದಾರರ ವಾಹನಕ್ಕೆ ಎಫ್.ಸಿ., ಅರ್ಜಿದಾರರಿಗೆ ವಾಹನ ಚಾಲನ ಪರವಾನಗಿ ಇದ್ದರೂ ಸಹ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೋಷರೋಪಣಾ ಪಟ್ಟಿಯಲ್ಲಿ ಅರ್ಜಿದಾರರ ನಿರ್ಲಕ್ಷ್ಯತೆ ಇಲ್ಲ ಎಂದು ಕಾಣಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅರ್ಜಿದಾರರ ನಿರ್ಲಕ್ಷ್ಯತೆ ಇದೆ ಎನ್ನುತ್ತಾರೆ. ದೋಷರೋಪಣಾ ಪಟ್ಟಿಯನ್ನು ನಾವು ಪಕ್ಷಗಾರರಲ್ಲದ ಕಾರಣ ಪ್ರಶ್ನಿಸಿಲ್ಲ. ಈ

ನ್ಯಾಯಾಲಯದಿಂದ ಸಮನ್ಸ್ ಬಂದ ಮೇರೆಯೂ ಪ್ರಶ್ನಿಸಿಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.